✆ Off : 26613091 / 26607167
42103360 / 26761877
Email : kea@kea.co.in
Web : www.kea.co.in

# KARNATAKA EMPLOYERS' ASSOCIATION

NO.74, 2nd FLOOR, SHANKARA ARCADE, VANIVILAS ROAD, BASAVANAGUDI
BENGALURU - 560 004
Reg. No. TU 507 / 20-3-1962

Date : 04-01-2017

CIRCULAR No.04/2017

To
All Members of the Association

## Sub: MINIMUM WAGES FOR EMPLOYMENT IN VENEER INDUSTRY

1. The Government of Karnataka has revised the minimum wages for employment in Veneer Industry1.1.2017 by a notification No.KE/25 LMW 2014 dated:27.12.2016 which has been published in Karnataka Gazette dated:28.12.2016. A copy of the Gazette notification is available on the KEA website.

2. In terms of the above notification minimum wages as revised in the notification shall be effective from 1.4.2017.

| Sl. No. | Category of employment | After revision in terms of notification dated:1.1.2017 | | |
|---|---|---|---|---|
| | | Zone - 1 | Zone-2 | Zone-3 |
| 1 | Plant cutter | Daily Rs. 414.00 Monthly Rs.10764/- | Daily Rs. 402.00 Monthly Rs.10452/- | Daily Rs. 376.00 Monthly Rs.9776/- |
| 2 | Peeling Machine operator | Daily Rs. 403.00 Monthly Rs.10478/- | Daily Rs. 393.00 Monthly Rs.10218/- | Daily Rs. 367.00 Monthly Rs.9542/- |
| 3 | Peeling Machine Asst Operator | Daily Rs. 397.00 Monthly Rs.10322/- | Daily Rs. 387.00 Monthly Rs.10062/- | Daily Rs.361.00 Monthly Rs.9386/- |
| 4 | Peeling Machine Helper, Reeling Machine Operator, Reeling Machine Helper, Plant pieces transporter | Daily Rs. 385.00 Monthly Rs.10010/- | Daily Rs. 375.00 Monthly Rs.9750/- | Daily Rs. 350.00 Monthly Rs.9100/- |

3. VDA payable on consumer CPI points of 6205 (1960-100) have been merged with the basic wages as notified above. The VDA payable will be on the raise in consumer price index points for 2015. The consumer price index for 2015 was 6237 points a rise in 332 points (7237-7205 = 332). Hence, the VDA payable from January 01.01.2017 will be will be 332 x 04 = 15.42 per day or Rs. 398.40 per month.

4. The notification stipulates that even if wages paid is more than the minimum wages, VDA as and when revised should be paid.Further it is

stipulated that basic wages and VDA as fixed shall be paid under the respective components. All other guidelines as contained in the earlier notification have remain unchanged. The members who are covered under the above notification may ensure that revised minimum wages are paid with effect from 1.1.2017.

**for KARNATAKA EMPLOYERS' ASSOCIATION**

**sd/-**
**(B.C. PRABHAKAR)**
**PRESIDENT**

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-III | ಬೆಂಗಳೂರು, ಬುಧವಾರ, ಡಿಸೆಂಬರ್ ೨೮, ೨೦೧೬ (ಪುಷ್ಯ ೭, ಶಕ ವರ್ಷ ೧೯೩೮) | ನಂ. ೧೫೨೨ |
| --- | --- | --- |
| Part-III | Bengaluru, Wednesday, December 28, 2016 ( Pushya 7, Shaka Varsha 1938) | No. 1522 |

**ಕಾರ್ಮಿಕ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಕಾಇ 22 ಎಲ್ಎಂಡಬ್ಲ್ಯೂ 2014 ಬೆಂಗಳೂರು, ದಿನಾಂಕ:27-12-2016.**

ಕರ್ನಾಟಕ ರಾಜ್ಯಾದ್ಯಂತ "ವಿನೀರ್" ಉದ್ದಿಮೆಗಳಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪರಿಷ್ಕರಿಸಲು ಸರ್ಕಾರದ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯಪತ್ರದ ಭಾಗ-4ಎ ರಲ್ಲಿ ದಿನಾಂಕ:30-10-2014 ರಂದು ಪ್ರಕಟಿಸಿ 1948ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರದಕಾಯ್ದೆ ಸಂಖ್ಯೆ: XI) ಕಲಂ 5ರ ಉಪಕಲಂ 1ರ (ಬಿ) ಖಂಡದ ಮೇರೆಗೆ ಬಾಧಿತರಾಗುವ / ಸಂಬಂಧಪಡುವ ವ್ಯಕ್ತಿಗಳ ಗಮನಕ್ಕೆ ತರಲಾಗಿದ್ದು, ಅವರಿಂದ ಸಲಹೆ / ಆಕ್ಷೇಪಣೆಗಳನ್ನು ಸ್ವೀಕರಿಸಲು ಎರಡು ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಅವರಿಂದ ಯಾವುದೇ ಸಲಹೆ / ಆಕ್ಷೇಪಣೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ನಂತರ, ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಮುಂದೆ ಮಂಡಿಸಲಾಗಿತ್ತು. ಸದರಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯನ್ನು ಸುಧೀರ್ಘವಾಗಿ ಸಮಾಲೋಚಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ. ಸದರಿ ಶಿಫಾರಸ್ಸುಗಳನ್ನು ಪರಿಗಣಿಸಿ, ಸರ್ಕಾರವು ಅಧಿಸೂಚನೆ ಸಂಖ್ಯೆ: ಕಾಇ 22 ಎಲ್ಎಂಡಬ್ಲ್ಯೂ 2014ನ್ನು ದಿನಾಂಕ:30-07-2015ರಂದು ಹೊರಡಿಸಿತ್ತು.

"ವಿನೀರ್" ಉದ್ದಿಮೆಯ ಮಾಲೀಕರುಗಳು ರಿಟ್ ಅರ್ಜಿ ಸಂಖ್ಯೆ:20312-20313/2016ರಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: **ಕಾಇ 22 ಎಲ್ಎಂಡಬ್ಲ್ಯೂ 2014**, ದಿನಾಂಕ:30-07-2015ನ್ನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ಸದರಿ ರಿಟ್ ಅರ್ಜಿ ಸಂಖ್ಯೆ:20312-20313/2016ರಲ್ಲಿ ದಿನಾಂಕ: 21-04-2016ರಂದು ಕರ್ನಾಟಕ ರಾಜ್ಯ ಮಾನ್ಯ ಉಚ್ಛ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯಲ್ಲಿ ಕೆಳಕಂಡಂತೆ ಆದೇಶಿಸಿರುತ್ತದೆ:-

"There shall be interim stay of implementation of the impugned Notification dated: 30-07-2015 (Annexure-C) subject to the condition that petioner shall pay 75% of the amount specified for the different categories under the said Notification dated: 30-07-2015 with prospective effect from the date of Notification".

ಮಾನ್ಯ ಉಚ್ಛ ನ್ಯಾಯಾಲಯದ ಮೇಲ್ಕಂಡ ಮಧ್ಯಂತರ ಆದೇಶದನ್ವಯ ನಿಗದಿಪಡಿಸಲಾದ ಶೇ. 75 ಕನಿಷ್ಠ ವೇತನವನ್ನು ದಿನಾಂಕ:30-07-2015ರಿಂದ ದಿನಾಂಕ:31-12-2016ರವರೆಗೆ ಉದ್ಯೋಗದಾತರು ನೀಡಬೇಕಾಗಿರುತ್ತದೆ. ಸರ್ಕಾರವು ತನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ:30-07-2015ರಿಂದ ದಿನಾಂಕ:31-12-2016ರವರೆಗೆ ಮಾನ್ಯ ಉಚ್ಛ ನ್ಯಾಯಾಲಯದ ಮಧ್ಯಂತರ ಆದೇಶದಲ್ಲಿ ನಿಗದಿಪಡಿಸಿದ ಶೇ. 75 ವೇತನವನ್ನು ಈ ಅವಧಿಯ ಕನಿಷ್ಠ ವೇತನವೆಂದು ಪರಿಗಣಿಸಿ ಅದನ್ನೇ ಸ್ಥಿರೀಕರಿಸಿರುತ್ತದೆ. ಇದರಿಂದಾಗಿ, ದಿನಾಂಕ:30-07-2015ರಿಂದ ದಿನಾಂಕ: 31-12-2016ರ ಅವಧಿಗೆ ಹಿಂಬಾಕಿ ವೇತನ ನೀಡುವ ಪ್ರಮೇಯ ಉದ್ಭವಿಸುವುದಿಲ್ಲ.

ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಪಿಟಿಷನ್ **ಸಂಖ್ಯೆ:** 43384-43428/2016(L-MW) ದಿನಾಂಕ:06-09-2016ರಲ್ಲಿ ನೀಡಿರುವ ತೀರ್ಪಿನ ಕಂಡಿಕೆ-8 ಮತ್ತು 9ರಲ್ಲಿ ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

"8. There is no requirement in law that while establishing an economic policy, the Government is required to give reasons for deviating, or for overlooking the recommendations of the committee. The Government is free to accept, modify, or reject the recommendations of the committee. Therefore, the contention raised by the learned counsel, that reasons need to be stated in the notification if the State disagrees with the advice tendered by the committee, is clearly untenable.

"9. In catena of cases, the Hon'ble Supreme Court has clearly opined that economic policies are prerogative of the Government. While the High Courts, under its writ jurisdiction, may examine "the legality" of economic policy, but they are not to examine the "soundness" of the economic policy. The jurisdiction for interfering with the economic policy by the Government is, thus, extremely narrow. It is arena where angels fear to tread: the High Courts, under its writ jurisdiction, is not expected to rush in like a fool where angels fear to tread"

ಈ ಬಗ್ಗೆ ದಿನಾಂಕ:09-12-2016ರಂದು ಸಂಬಂಧಪಟ್ಟ ಕಾರ್ಮಿಕ ಸಂಘಗಳು ಹಾಗೂ ಉದ್ದಿಮೆದಾರರುಗಳ ಸಭೆಯನ್ನು ಸರ್ಕಾರದ ಮಟ್ಟದಲ್ಲಿ ನಡೆಸಿದ್ದು, ಸದರಿ ಸಭೆಗಳಲ್ಲಿ ಉಭಯ ಪಕ್ಷಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು, ಸರ್ಕಾರವು ಪ್ರಸಕ್ತ ಸನ್ನಿವೇಶಕ್ಕೆ ಸರಿ ಹೊಂದುವಂತಹ ಕನಿಷ್ಠ ವೇತನ ನಿಗದಿಪಡಿಸುವ ಪ್ರಕ್ರಿಯೆಯನ್ನು ಗಂಭೀರವಾಗಿ ಪರಿಗಣಿಸಿ, ದೇಶದ ವಿವಿಧ ರಾಜ್ಯಗಳ ಕನಿಷ್ಠ ವೇತನವನ್ನು ಪರಿಗಣಿಸಿ, ಪ್ರಸಕ್ತದಲ್ಲಿ ಈ ಕೆಳಕಂಡಂತೆ ಕನಿಷ್ಠ ವೇತನವನ್ನು ನಿಗದಿಪಡಿಸಿರುತ್ತದೆ.

ರಿಟ್ ಅರ್ಜಿ ಸಂಖ್ಯೆ:50699-184/2015ರಲ್ಲಿ ದಿನಾಂಕ:28.10.2016ರಂದು ಕರ್ನಾಟಕ ರಾಜ್ಯ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನನ್ವಯ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಶಿಫಾರಸ್ಸನ್ನು ಗಣನೆಗೆ ತೆಗೆದುಕೊಂಡು, 1948ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರ ಕಾಯಿದೆ ಸಂಖ್ಯೆ: XI) ಕಲಂ 3ರ ಉಪಕಲಂ (1)ರ (ಬಿ)ರ ಮತ್ತು ಹಾಗೂ ಕಲಂ 5ರ ಉಪಕಲಂ (1)ನೇ (ಬಿ) ಮತ್ತು 5[2] ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯಾದ್ಯಂತ "ವಿನೀರ್" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ದಿನಾಂಕ:01-01-2017ರಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಈ ಅಧಿಸೂಚನೆಯ ಅನುಸೂಚಿಯಲ್ಲಿ ಇರುವಂತೆ ಪರಿಷ್ಕರಿಸಲಾಗಿದೆ.

### ಅನುಸೂಚಿ

| ಕ್ರ ಸಂ | ಕೆಲಸದ ವರ್ಗಗಳು | ವಲಯ - 1 | | ವಲಯ - 2 | | ವಲಯ - 3 | |
|---|---|---|---|---|---|---|---|
| | | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| 1 | ಯಾರ್ಡ್ ವಿಭಾಗ: | | | | | | |
| | ಅ)ನಾಟಗಳನ್ನು ಕೊಯ್ದು ತುಂಡು ಮಾಡುವುದು | 414-00 | 10764-00 | 402-00 | 10452-00 | 376-00 | 9776-00 |
| | ಆ)ನಾಟಗಳ ತುಂಡುಗಳನ್ನು ಸಾಗಿಸುವುದು | 385-00 | 10010-00 | 375-00 | 90750-00 | 350-00 | 9100-00 |
| 2 | ಫೀಲಿಂಗ್ ವಿಭಾಗ: | | | | | | |
| | ಅ)ಪೀಲಿಂಗ್ ಮೆಷಿನ್ ಆಪರೇಟರ್ | 403-00 | 10478-00 | 393-00 | 10218-00 | 367-00 | 9542-00 |
| | ಆ)ಪೀಲಿಂಗ್ ಮೆಷಿನ್ ಸಹಾಯಕ ಆಪರೇಟರ್ | 397-00 | 10322-00 | 387-00 | 10062-00 | 361-00 | 9386-00 |
| | ಇ)ಪೀಲಿಂಗ್ ಮೆಷಿನ್ ಸಹಾಯಕ<br>ಈ)ಪೀಲಿಂಗ್ ಮೆಷಿನ್ ಹೆಲ್ಪರ್<br>ಉ)ರೀಲಿಂಗ್ ಮೆಷಿನ್ ಆಪರೇಟರ್<br>ಊ)ರೀಲಿಂಗ್ ಮೆಷಿನ್ ಹೆಲ್ಪರ್<br>ಋ)ಕ್ವಲಿಯರ್ | 385-00 | 10010-00 | 375-00 | 9750-00 | 350-00 | 9100-00 |

| | | | | | | | |
|---|---|---|---|---|---|---|---|
| 3 | ಡ್ರಾಯಿಂಗ್ ವಿಭಾಗ | | | | | | |
| | ಅ)ಡ್ರಾಯರ್ ಆಪರೇಟರ್ | 413-00 | 10738-00 | 402-00 | 10452-00 | 376-00 | 9776-00 |
| | ಆ)ಡ್ರಾಯರ್ ಫೀಡಿಂಗ್ ಮನ್ | 400-00 | 10400-00 | 390-00 | 10140-00 | 364-00 | 9464-00 |
| 4 | ಕ್ರೈ ಪಿಂಗ್ ವಿಭಾಗ<br>ಅ)ಡೆಕೋರೇಟಿವ್ ಕ್ರೈಪಿಂಗ್ ಆಪರೇಟರ್ | 430-00 | 11180-00 | 420-00 | 10920-00 | 391-00 | 10166-00 |
| | ಆ)ಸಹಾಯಕ ಕ್ರೈಪಿಂಗ್ ಆಪರೇಟರ್ | 400-00 | 10400-00 | 390-00 | 10140-00 | 364-00 | 9464-00 |
| | ಇ)ಹೆಲ್ಪರ್ | 385-00 | 10010-00 | 375-00 | 9750-00 | 350-00 | 9100-00 |
| 5 | ಸಾರ್ಟಿಂಗ್ ವಿಭಾಗ<br>ಅ)ಸಾರ್ಟರ್ | 400-00 | 10 400-00 | 390-00 | 10140-00 | 364-00 | 9464-00 |
| 6 | ಗುಲೇಟಿಂಗ್ ಕಟ್ಟರ್<br>ಅ)ಗುಲೇಟಿಂಗ್ ಕಟ್ಟರ್ | 430-00 | 11180-00 | 420-00 | 10920-00 | 391-00 | 10166-00 |
| | ಆ)ಸ್ಲೀಸಿಂಗ್ ಮನ್ | 400-00 | 10400-00 | 390-00 | 10140-00 | 364-00 | 9464-00 |
| | ಇ)ಹೆಲ್ಪರ್ | 385-00 | 10010-00 | 375-00 | 9750-00 | 350-00 | 9100-00 |
| 7 | ಬಾಯ್ಲರ್ ವಿಭಾಗ<br>ಅ)ಸೀನಿಯರ್ ಬಾಯ್ಲರ್ ಅಟೆಂಡೆಂಟ್ | 420-00 | 10920-00 | 408-00 | 10608-00 | 381-00 | 9906-00 |
| | ಆ)ಬಾಯ್ಲರ ಅಟೆಂಡೆಂಟ್ | 413-00 | 10738-00 | 402-00 | 10452-00 | 375-00 | 9750-00 |
| | ಇ)ಬಾಯ್ಲರ್ ಪೈರ್ ಮನ್ | 400-00 | 10400-00 | 390-00 | 10140-00 | 364-00 | 9464-00 |
| 8 | ಬ್ಲೀಚಿಂಗ್ ವಿಭಾಗ<br>ಅ)ಬೀಂಡಸ್ ಆಪರೇಟರ್<br>ಆ)ಸ್ಟ್ರಾಗಿಂಗ್ ಮ್ಯಾನ್ | 420-00 | 10920-00 | 408-00 | 10608-00 | 381-00 | 9906-00 |
| | ಇ)ಸಹಾಯಕರು<br>ಈ)ಹೆಲ್ಪರ್ | 385-00 | 10010-00 | 375-00 | 9750-00 | 350-00 | 9100-00 |
| | ಉ)ಬಾಯ್ಲಿಂಗ್ ವ್ಯಾಟ್ ಅಟೆಂಡರ್<br>ಊ)ಎಲೆಕ್ಟ್ರಿಕ್ ಹಾಯಿಸ್ಟ್ ಆಪರೇಟರ್ | 400-00 | 10400-00 | 390-00 | 10140-00 | 373-00 | 9698-00 |
| 9 | ಸ್ಲ್ಯಾಸರ್ ವಿಭಾಗ<br>ಅ)ಸ್ಲ್ಯಾಸರ್ ಆಪರೇಟರ್<br>ಆ)ಸಹಾಯಕ ಸ್ಲ್ಯಾಸರ್ ಆಪರೇಟರ್ | 437-00 | 11362-00 | 425-00 | 11050-00 | 397-00 | 10322-00 |
| | ಇ) ಬ್ಲೇಡ್ ಶಾರ್ಪರ್ | 430-00 | 11180-00 | 420-00 | 10920-00 | 391-00 | 10166-00 |
| | ಈ) ಹೆಲ್ಪರ್ | 385-00 | 10010-00 | 375-00 | 9750-00 | 350-00 | 9100-00 |

| | | | | | | | |
|---|---|---|---|---|---|---|---|
| 10 | ಮೆಷಿನ್ ಶಾಪ್ | | | | | | |
| | ಅ)ಟರ್ನರ್<br>ಆ)ಫಿಟ್ಟರ್<br>ಇ)ವೆಲ್ಡರ್<br>ಈ)ಗ್ಯಾಸ್ ಕಟ್ಟಿಂಗ | 430–00 | 11180–00 | 420–00 | 10920–00 | 391–00 | 10166–00 |
| | ಉ)ಕಾರ್ಪೆಂಟರ್<br>ಊ) ಸೀವನ ಪಂಪ್ ಅಪರೇಟರ್ | 400–0 | 10400–00 | 390–00 | 10140–00 | 364–00 | 9464–00 |
| | ಋ) ಹೆಲ್ಪರ್ | 385–00 | 10010–00 | 375–00 | 9750–00 | 350–00 | 9100–00 |
| 11 | ಸಿಬ್ಬಂದಿ ಮತ್ತು ಆಡಳಿತ | | | | | | |
| 1. | ಫಾರೆಸ್ಟ್ ಸೂಪರ್ ವೈಸರ್ | 476–00 | 12376–00 | 464–00 | 12064–00 | 433–00 | 11258–00 |
| 2. | ಜೂನಿಯರ್ ಫಾರೆಸ್ಟ್ ಸೂಪರ್ವೈಸರ್ | 467–00 | 12142–00 | 455–00 | 11830–00 | 424–00 | 11024–00 |
| 3. | ಸೀನಿಯರ್ ಕ್ಲರ್ಕ/ ಕ್ಲರ್ಕ (ಪದವೀಧರ)/ಟೈಂ ಕೀಪರ್/ | 458–00 | 11908–00 | 446–00 | 11596–00 | 416–00 | 10816–00 |
| 4. | ಜೂನಿಯರ್ ಕ್ಲರ್ಕ (ಪದವೀಧರರಲ್ಲದವರು) | 442–00 | 11492–00 | 431–00 | 11206–00 | 402–00 | 10452–00 |
| 5. | ಗೆಸ್ಟ್ ಹೌಸ್ ಕುಕ್ | 430–00 | 11180–00 | 420–00 | 10920–00 | 391–00 | 10166–00 |
| | ಚಾಲಕರು /ಕ್ಲೀನರ್ಸ್ (ಡ್ರೈವರ್/ ಕ್ಲೀನರ್) | | | | | | |
| 1. | ಲಾರಿ ಡ್ರೈವರ್ | 449–00 | 11674–00 | 437–00 | 11362–00 | 407–00 | 10582–00 |
| 2. | ಕಾರ್/ಜೀಪ್ ಡ್ರೈವರ್ | 421–00 | 10946–00 | 410–00 | 10660–00 | 383–00 | 9958–00 |
| 3. | ಲಾರಿ/ಕಾರ್/ಜೀಪ್ ಕ್ಲೀನರ್ | 385–00 | 10010–00 | 375–00 | 9750–00 | 350–00 | 9100–00 |
| | ಕಛೇರಿ ಸಿಬ್ಬಂದಿ | | | | | | |
| i. | ಮ್ಯಾನೇಜರ್/ ಪರ್ಸನಲ್ ಆಫೀಸರ್ | 511–00 | 13286–00 | 497–00 | 12922–00 | 464–00 | 12064–00 |
| 2. | ಅಸಿಸ್ಟೆಂಟ್ ಮ್ಯಾನೇಜರ್/ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್ | 494–00 | 12844–00 | 481–00 | 12506–00 | 449–00 | 11674–00 |
| 3. | ಅಕೌಂಟೆಂಟ್ | 476–00 | 12376–00 | 464–00 | 12064–00 | 433–00 | 11258–00 |
| 4.<br>5.<br>6. | ಕ್ಯಾಷಿಯರ್<br>ಶೀಘ್ರಲಿಪಿಗಾರ/ಕಂಪ್ಯೂಟರ್ ಆಪರೇಟರ್<br>ಸ್ಟೋರ್ ಕೀಪರ್ | 467–00 | 12142–00 | 455–00 | 11830–00 | 425–00 | 11050–00 |
| 7.<br>8. | ಬೆರಳಚ್ಚುಗಾರ/ಡಾಟಾ ಎಂಟ್ರೀ ಆಪರೇಟರ್/ ಟೈಪಿಸ್ಟ್<br>ಗುಮಾಸ್ತ/ಕ್ಲರ್ಕ | 458–00 | 11908–00 | 446–00 | 11596–00 | 416–00 | 10816–00 |
| 9. | ಆಫೀಸ್‌ಬಾಯ್/ಪ್ಯೂನ್/ವಾಚಮನ್/ ಅಟೆಂಡರ್/ಸ್ವೀಪರ್ | 385–00 | 10010–00 | 375–00 | 9750–00 | 350–00 | 9100–00 |

**ತುಟ್ಟಿಭತ್ಯೆ:**

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960=100) 6205 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 6205 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿ ಭತ್ಯೆ ಪಾವತಿಸತಕ್ಕದ್ದು.

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಾಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2015 ರಿಂದ ಡಿಸೆಂಬರ್ 2015) ಸರಾಸರಿ ಆಧಾರದ ಮೇಲೆ 2016 ಏಪ್ರಿಲ್ 1 ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು 26 ದಿನಗಳಿಂದ ವಿಭಾಗಿಸಿ, 4 ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಲೆಕ್ಕ ಹಾಕತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:.

**ಅ) ಮಾಸಿಕ ವೇತನವನ್ನು ಪಡೆಯುವವರು:.** ಪ್ರತಿ ವರ್ಷ ಹೆಚ್ಚಾಗುವ ಸಿ ಪಿ ಐ ಅಂಶಗಳು X ತುಟ್ಟಿಭತ್ಯೆಯ ದರ X 30 ದಿನಗಳು= ತಿಂಗಳ ತುಟ್ಟಿಭತ್ಯೆ

**ಆ) ದಿನಗೂಲಿ ವೇತನ ಪಡೆಯುವವರು :.**

<u>ಪ್ರತಿ ವರ್ಷ ಹೆಚ್ಚಾಗುವ ಅಂಶಗಳು X ತುಟ್ಟಿಭತ್ಯೆಯ ದರ X 30</u> = ದಿನದ ತುಟ್ಟಿಭತ್ಯೆ

26

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು

3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ವೇತನ ದರಗಳನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು ಹಾಗೂ ಕಡ್ಡಾಯವಾಗಿ ಕಾಲಕಾಲಕ್ಕೆ ಹೆಚ್ಚಾಗುವ ತುಟ್ಟಿಭತ್ಯೆಯನ್ನು ಸಹ ಪಾವತಿಸತಕ್ಕದ್ದು.

4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.

5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.

6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ದಿನಗಳಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

7. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.

8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಅವರ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.

9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

10. ಟ್ರೈನಿಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ **ವೇತನದ** ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

11. ಈ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ಹೆಚ್ಚಾಗುವ ತುಟ್ಟಿಭತ್ಯೆಯನ್ನು ಆಯಾ ಅಂಕಣಗಳಲ್ಲಿಯೇ ನಮೂದಿಸಿ ಪಾವತಿ ಮಾಡತಕ್ಕದ್ದು.

12. **ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ' ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿ ಕೊಂಡು ಹೋಗಬಲ್ಲವರಾಗಿರಬೇಕು

13. **ಕುಶಲ:** ಕುಶಲ ಕೆಲಸಗಾರರು ಎಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ, ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

14. **ಅರೆ ಕುಶಲ :** ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

15. **ಕುಶಲರಲ್ಲದವರು :** ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯುಳ್ಳದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿರುವ ಕೆಲಸ ಮಾಡುವವರು. ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

ಯಾವುದೇ ಯಂತ್ರಗಳನ್ನು ನಡೆಸಲು ನೇಮಿಸಿದ್ದ ಕಾರ್ಮಿಕರನ್ನು ಕುಶಲರಲ್ಲದ ವರ್ಗಕ್ಕೆ ಸೇರಿಸಬಾರದು. ಕಾವಲುಗಾರ, ಸಿಪಾಯಿ, ಚೌಕೀದಾರ, ಕಸ ಗುಡಿಸುವವರು, ಜಾಡಮಾಲಿ ಹಾಗೂ ಅದೇ ತರಹದ ಕೆಲಸ ಮಾಡುವ ಕಾರ್ಮಿಕರನ್ನು ಕುಶಲರಲ್ಲದ ವರ್ಗಕ್ಕೆ ಸೇರಿಸಬಹುದು.

ವಲಯ.1 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು ಮತ್ತು ಗೊತ್ತುಪಡಿಸಿದ ಅಗ್ಲೋಮರೇಷನ್ ಪ್ರದೇಶಗಳು

ವಲಯ.2 : ವಲಯ.1ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು

ವಲಯ.3 : ವಲಯ.1 ಮತ್ತು ವಲಯ.2ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಭಾಗಗಳು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಎ.ಎನ್.ರಾಧಾಮಣಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (68) ಪ್ರತಿಗಳು: 200